SPEED POST

ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–1**

ಸಂಖ್ಯೆ:ಹೆಚ್.ಆರ್.ಎಂ.ಎಸ್/ಕಪಶಾ–01/2018–19 ದಿನಾಂಕ:07.09.2019

**ಸುತ್ತೋಲೆ**

ವಿಷಯ: ಕರ್ನಾಟಕ ಪಬ್ಲಿಕ್ ಶಾಲೆಗಳ ಪ್ರಾಥಮಿಕ, ಪ್ರೌಢ ಮತ್ತು ಕಾಲೇಜು ವಿಭಾಗಗಳ ಶಿಕ್ಷಕರು/ನೌಕರರ ವೇತನವನ್ನು ಒಂದೇ ಡಿಡಿಓ ಕೋಡ್‌ನಲ್ಲಿ ಸೆಳೆಯುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ. ಇಡಿ 04 ಯೋಸಕ 2017 ದಿ:05.01.2018 & 21.08.2018.

2. ಈ ಕಛೇರಿ ಸುತ್ತೋಲೆ ಸಂಖ್ಯೆ:SSA/QMT/KPS/2018–19 ದಿ:18.12.2018.

3. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಹೆಚ್‌ಆರ್‌ಎಂಎಸ್/ಕಪಶಾ–01/18–19 ದಿ:21.06.19

&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳಿಗೆ ಒಂದೇ ಸಂಸ್ಥೆಯಲ್ಲಿ ಗುಣಮಟ್ಟದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ನೀಡುವ ಉದ್ದೇಶದಿಂದ ಒಂದೇ ಕಡೆ 1 ರಿಂದ 12ನೇ ತರಗತಿಗಳನ್ನು ಹೊಂದಿರುವ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಒಗ್ಗೂಡಿಸಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು 2018–19ನೇ ಸಾಲಿನಿಂದ ಪ್ರಾರಂಭಿಸಲು ಉಲ್ಲೇಖ(1)ರಂತೆ ಚಾಲನೆ ನೀಡಲಾಗಿದೆ.

ಪ್ರಸ್ತುತ ಕರ್ನಾಟಕ ಪಬ್ಲಿಕ್ ಶಾಲೆಗಳ ಪ್ರಾಥಮಿಕ ಶಾಲಾ ಶಿಕ್ಷಕರ ವೇತನವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಡಿಡಿಓ ಕೋಡ್‌ನಲ್ಲಿಯೂ, ಪ್ರೌಢ ಶಾಲಾ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರ ವೇತನವನ್ನು ಮುಖ್ಯ ಶಿಕ್ಷಕರು/ಉಪ ಪ್ರಾಂಶುಪಾಲರ ಡಿಡಿಓ ಕೋಡ್‌ನಲ್ಲಿಯೂ ಹಾಗೆಯೇ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರ ವೇತನವನ್ನು ಪ್ರಾಂಶುಪಾಲರ ಡಿಡಿಓ ಕೋಡ್‌ನಲ್ಲಿಯೂ ಸೆಳೆಯಲಾಗುತ್ತಿದೆ.

ಉಲ್ಲೇಖ(2)ರ ಸುತ್ತೋಲೆಯಂತೆ ಕೆಪಿಎಸ್ ಶಾಲೆಗಳಲ್ಲಿನ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜಿನ ಡಿಡಿಓ ಕೋಡ್‌ನಲ್ಲಿರುವ ಶಿಕ್ಷಕರು/ಸಿಬ್ಬಂದಿಗಳ ಎಲ್ಲಾ ಮಾಹಿತಿಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಡಿಡಿಓ ಕೋಡ್‌ಗೆ ವರ್ಗಾಯಿಸಿ ಹಾಗೂ ಕೆಪಿಎಸ್ ಕಾಲೇಜಿನ ಪ್ರಾಂಶುಪಾಲರನ್ನು ಇಡೀ ಶಾಲೆಯ ವೇತನ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯಾಗಿ ಕಾರ್ಯಗತಗೊಳಿಸಿ ವೇತನ ಸೆಳೆಯಲು ಸೂಚಿಸಿ ಎಲ್ಲಾ ಅಗತ್ಯ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿದೆ.

ಆದರೆ ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು/ಸಿಬ್ಬಂದಿಗಳ ಮಾಹಿತಿಯನ್ನು ಪದವಿ ಪೂರ್ವ ಕಾಲೇಜಿನ ಡಿಡಿಓ ಕೋಡ್ ವರ್ಗಾವಣೆ ಮಾಡಲು ಕೋರಿ ಈವರೆಗೆ ಒಟ್ಟಾರೆಯಾಗಿ ಕೇವಲ 34 ಕೆ.ಪಿ.ಎಸ್ ಶಾಲೆಗಳಿಂದ ಮಾತ್ರ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿರುತ್ತದೆ. ಉಳಿಕೆ ಶಾಲೆಗಳಿಂದ ಪ್ರಸ್ತಾವನೆಗಳನ್ನು ಈವರೆಗೆ ಈ ಕಛೇರಿಗೆ ಸಲ್ಲಿಸಿರುವುದಿಲ್ಲ. ಉಳಿದ ಕರ್ನಾಟಕ ಪಬ್ಲಿಕ್ ಶಾಲೆಗಳಿಂದ ಮಾಹಿತಿಯನ್ನು ಸಲ್ಲಿಸಲು ವಿಳಂಬವಾದಲ್ಲಿ ಮುಂಬರುವ ದಿನಗಳಲ್ಲಿ ಸದರಿ ಶಾಲಾ ಶಿಕ್ಷಕರು/ಸಿಬ್ಬಂದಿಗಳಿಗೆ ವೇತನದ ಸಮಸ್ಯೆ ಉಂಟಾಗುವ ಸಂಭವವಿರುತ್ತದೆ.

ಸದರಿ ವಿಷಯವನ್ನು ಮಾನ್ಯ ಆಯುಕ್ತರು ಗಂಭೀರವಾಗಿ ಪರಿಗಣಿಸಿರುವುದರಿಂದ, ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಮಾಹಿತಿ ವರ್ಗಾವಣೆ ವಿಷಯಕ್ಕೆ ಸಂಬಂದಿಸಿದಂತೆ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಉಲ್ಲೇಖ(2) ಮತ್ತು ಉಲ್ಲೇಖ(3)ರ ಸುತ್ತೋಲೆ ಪತ್ರಗಳಲ್ಲಿ ಈಗಾಗಲೇ ಸೂಚಿಸಿದಂತೆ ತಮ್ಮ ವ್ಯಾಪ್ತಿಯ ಎಲ್ಲಾ ಕೆಪಿಎಸ್ ಶಾಲಾ ಶಿಕ್ಷಕರು/ಸಿಬ್ಬಂದಿಗಳ ಮಾಹಿತಿಯನ್ನು ಸಿದ್ದಪಡಿಸಿ ಸಂಬಂದಪಟ್ಟ ವಿಷಯ ನಿರ್ವಾಹಕರನ್ನು ನಿಯೋಜಿಸಿ ಅಗತ್ಯ ದಾಖಲೆಗಳೊಂದಿಗೆ ಈ ಕಛೇರಿಗೆ ದಿನಾಂಕ:16.09.2019ರಂದು ಖುದ್ದಾಗಿ ಹಾಜರಾಗುವಂತೆ ತಿಳಿಸಿದೆ. ಜಿಲ್ಲಾ ಉಪನಿರ್ದೇಶಕರುಗಳು/ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಜಿಲ್ಲೆ/ತಾಲ್ಲೂಕು ವ್ಯಾಪ್ತಿಯ ಎಲ್ಲಾ ಕೆಪಿಎಸ್ ಶಾಲಾ ಶಿಕ್ಷಕರು/ಸಿಬ್ಬಂದಿಗಳ ಮಾಹಿತಿಯನ್ನು ಉಲ್ಲೇಖ(2)ರಲ್ಲಿನ ಅನುಬಂಧಗಳಲ್ಲಿ ಸಿದ್ದಪಡಿಸಿ ನೀಡುವಂತೆ ಕೆ.ಪಿ.ಎಸ್ ಶಾಲಾ ಮುಖ್ಯಸ್ಥರಿಗೆ ನಿರ್ದೇಶನ ನೀಡುವಂತೆ ತಿಳಿಸಿದೆ.

(ಅರುಳ್ ಕುಮಾರ್)
ಜಂಟಿ ನಿರ್ದೇಶಕರು(ಆಡಳಿತ)

ಪ್ರತಿಯನ್ನು:

1. ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ/ಆರ್.ಎಂ.ಎಸ್.ಎ ಕಛೇರಿ, ಬೆಂಗಳೂರು ರವರಿಗೆ ವಂದನೆಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾ.ಶಿ.ಇ, ಧಾರವಾಡ ವಿಭಾಗ, ಧಾರವಾಡ ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಅಪರ ಆಯುಕ್ತರು, ಸಾ.ಶಿ.ಇ, ಕಲಬುರಗಿ ವಿಭಾಗ, ಕಲಬುರಗಿ ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
4. ನಿರ್ದೇಶಕರು, ಪ್ರೌಢಶಿಕ್ಷಣ, ಸಾ.ಶಿ.ಇ, ಆಯುಕ್ತರ ಕಛೇರಿ ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಮುಂದಿನ ಕ್ರಮಕ್ಕಾಗಿ.
5. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಸಾ.ಶಿ.ಇ, ಆಯುಕ್ತರ ಕಛೇರಿ ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಮುಂದಿನ ಕ್ರಮಕ್ಕಾಗಿ.
6. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ಆಯುಕ್ತರ ಕಛೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7. ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಮುಂದಿನ ಕ್ರಮಕ್ಕಾಗಿ.
8. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಮುಂದಿನ ಕ್ರಮಕ್ಕಾಗಿ.
9. ಕಛೇರಿ ಪ್ರತಿ.

\\10.96.135.110\shared file\hrms letters\2018-2019 letters\28_19.doc